

ತಂದುಕೊಂಡುವಂತೆ ಹೇಳಿದ ಪೊಲೀಸ್ ಇನ್‌ಸ್ಪೆಕ್ಟರ್ ಮೇಲೂ, ರಾಜೀವನ ಕೋಪ ನೆತ್ತಿಯ ಮೇಲಿನ ಸೂರ್ಯನ ತಾಪದಂತೆ ಏರತೊಡಗಿತು.

ಸರಸ್ವತಿಯು ರಾಜೀವನ ಮನೆಯಲ್ಲಿ ಅಡುಗೆಯವಳಾಗಿ ಕೆಲಸಕ್ಕೆ ಸೇರಿ ಒಂದು ವರ್ಷವಾಗಿತ್ತು. ಮನೆಯಲ್ಲಿ ಗಂಡ, ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುತ್ತಿದ್ದುದರಿಂದ, ಅಡುಗೆ ಮಾಡಿ ಮನೆಯನ್ನು ನೋಡಿಕೊಳ್ಳಲು ಅವಳನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಅವಳನ್ನು ರಾಜೀವನ ಹೆಂಡತಿಯೇ ಸೆಲೆಕ್ಟ್ ಮಾಡಿದ್ದಳು. 'ಅವಳೂ ಕೂಡ ನಮ್ಮ ಜಾತಿಯವಳಂತೆ ಕಣ್ರೀ' ಎಂದ ಹೆಂಡತಿಗೆ, 'ಅವಳು ಅಡುಗೆ ಚೆನ್ನಾಗಿ ಮಾಡಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಂಡರಾಯಿತು. ಯಾವ ಜಾತಿಯಾದರೇನು?' ಎಂಬ ನಿಲುವು ರಾಜೀವನದು. ಗೌರವರ್ಣದ ಮೂವತ್ತರ ಆಸುಪಾಸಿನ ಸರಸ್ವತಿ ಬರೀ ನೋಡಲಷ್ಟೇ ಲಕ್ಷಣವಲ್ಲದೇ ಮಾಡುವ ಅಡುಗೆಯೂ ಶುಚಿ-ರುಚಿಯಾಗಿರುತ್ತಿತ್ತು. 'ಆಕೆ ಮಾಡಿದ ಪುಳಿಯೋಗರೆ ರುಚಿ ನೋಡಿಯೇ ಹೇಳಬಲ್ಲೆ, ಆಕೆ ನಮ್ಮ ಜಾತಿಯವಳು ಮಾತ್ರವಲ್ಲ, ಗೋತ್ರದಲ್ಲೂ ನಮ್ಮವಳೆಂದು' ಎಂದ ಹೆಂಡತಿಗೆ, 'ಯಾಕೆ ಪುಳಿಯೋಗರೆಯನ್ನು ನಮ್ಮ ಜಾತಿಯವರೇನಾದರೂ ಪೇಟೆಂಟ್ ಮಾಡಿಸಿಕೊಂಡಿದ್ದಾರಾ?' ಎಂದು ರಾಜೀವ ಕುಹಕವಾಡಿದ್ದ. ರಾಜೀವ ಏನೇ ವ್ಯಂಗ್ಯ ಮಾಡಿದರೂ ಆಕೆಯ ಅಡುಗೆಯ ರುಚಿಯನ್ನು ಮಾತ್ರ ಒಪ್ಪಿಕೊಂಡಿದ್ದ. ಮಗುವಿಗೆ ಹುಷಾರಿಲ್ಲ ಎಂದು ಹೇಳಿ ಎರಡು ದಿನ ರಜಾ ಹಾಕಿ ಹೋದ ಸರಸ್ವತಿಯು